# IN THE COURT OF THE PRL. DISTRICT AND SESSIONS JUDGE, BAGALKOTE

SC. No.80/2023

| | | | |
|---|---|---|---|
| Name | : | Dr. Vijaya @ Dadesab Kuntoji | P.W-17 |
| Father's name | : | Mohinuddin | CW-29 |
| Age | : | 49 Years | |
| Occupation | : | Senior Specialist, District Hospital, Vijayapur | |
| Resident of | : | Vijaypur | |

Witness duly sworn on 27.11.2025

## Examination-in-Chief by learned Public Prosecutor

Since 2011 to 13.07.2025, I was working as Senior Specialist in District Government Hospital, Bagalkote.

On 09.08.2023 I received a requisition from PSI, Bagalkot Rural Police Station to conduct postmortem on the dead body of one Bayavva Mallappa Meti. On the basis of said requisition I have conducted postmortem on the dead body of Bayavva from 11.30 p.m to 01.30 p.m.

As per the examination, the deceased was aged about 55 years, moderately built and nourished, measuring about 5 feet Rigormorties present in the neck and upper lips and trunk. Postmortem lividity present over back and close examination, I noticed the following injuries on the body;

1] Contused lacerated wound over the back of right side of head measuring 5X2 CM, blood clots present.

2] Contused lacerated wounds over frontal aspect of head two in number, measuring 4X2 CM and 5X2 CM.

3) contused lacerated wound over vertex measuring 4X2 CM.

4) Contused lacerated wound over forehead, measuring 3X2CM.

5) Contusen over right cheek, right eyebrow measuring 1X1 CM.

On opening the scalp fissured fracture of right temporo parietal region was present. On opining the skull, sub arachnoid, subural hemorrhage present.

All the injuries are anti-mortem in nature and are caused by application of blunt force. The opinion regarding cause of death was kept pending for Chemical Analysis Report of FSL. The time since death is about 6 to 12 hours. Now I am seeing the postmortem report, the same is marked as Ex.P.28. Signature of witness is marked as Ex.P.28(a).

On 12.08.2023 I have furnished my provisional report stating that on the basis of postmortem findings, I am of the opinion that cause of death is due to haemorrhage shock secondary to injuries sustained over head. Injuries are caused by force due to blunt object. Now I am seeing the provisional report furnished by me. The same is marked as Ex.P.29. Signature of witness is marked as Ex.P.29(a).

On 29.09.2023 I have furnished my final opinion stating that on the basis of PM report and FSL report I am of the opinion that cause of death is due to hemorrhage shock secondary to injuries sustained to head. I am seeing the final report, marked as Ex.P.30 and signature of witness is marked as Ex.P.30(a).

On the same day the Bagalkote Rural Police had also brought a material/ iron rod for examination to ascertain if the injuries noted in PM report could be caused by the said material/ iron rod along with requsition. I have examined the material/iron rod and noted blood stains on the iron rod, thickness measuring 16 MM, length measuring 30 inches, circumference measuring 2 inches.

On the basis of examination I have opined that there is a possibility of infliction of injuries mentioned in PM report could be cause if beaten by the rod produced before me. Now I am seeing the requisition and the opinion furnished by me. The same is marked as Ex.P.31 and 32 and signature of witness are marked as Ex.P.31(a) and 32(a). I am now seeing the iron rod before the Court produced before me for my opinion and the same is already

marked as MO-7.

**Cross-examination by advocate appearing for the accused person**

It is false to state that injury No.1 to 3 mentioned in postmortem report is likely to occur if a person falls on sharp object stones. It is false to state that if a person false due to unconsciousness, the injuries noted in postmortem report is likely to occur. It is false to state that no material/iron rod is produced before me to ascertain my expert opinion regarding the injuries sustained to the deceased. It is false to state that at the instance of police officials, I have furnished false opinion as per Ex.P.29, 30 and 32.

Re-examination: Nil.

(Typed to my dictation in open court on computer)

R O & A C

Prl. Dist. & Sessions Judge, Bagalkote.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.80/2023**

| | | |
|---|---|---|
| ಹೆಸರು | : ಶರಣಬಸಪ್ಪ ಸಂಗಳದ | ಪ್ರಾಸಾ-18 |
| ತಂದೆಯ ಹೆಸರು | : ನಾಗಪ್ಪ | ಚಾಸಾ-34 |
| ವರ್ಷ | : 40 ವರ್ಷ | |
| ಉದ್ಯೋಗ | : ಪಿ.ಎಸ್.ಐ. ಬೀಳಗಿ ಪೋಲಿಸ್ ಠಾಣೆ | |
| ವಿಳಾಸ | : ಬೀಳಗಿ | |

ದಿಃ 27.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 14.06.2023 ರಿಂದ 10.08.2025 ರವರೆಗೆ ಪಿ ಎಸ ಐ ಬಾಗಲಕೋಟೆ ಗ್ರಾಮಾಂತರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 09.08.2023 ರಂದು ಬಾಗಲಕೋಟೆ ಕೆರೂಡಿ ಆಸ್ಪತ್ರೆಯಿಂದ ಮೃತ ಬಾಯವ್ವ ರವರು ಮೃತ ಪಟ್ಟ ಬಗ್ಗೆ ಎಮ್ ಎಲ್ ಸಿ ಮಧ್ಯಾಹ್ನ 03.15 ಗಂಟೆಗೆ ಬಂದಿದ್ದು, ಅದನ್ನು ನಮ್ಮ ಠಾಣಾಧಿಕಾರಿಯಾದ ಹೆಚ್ ಸಿ -1445 ರವರು ಸ್ವೀಕರಿಸಿರುತ್ತಾರೆ. ಸದರಿ ಎಮ್ ಎಲ್ ಸಿ ಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ -33 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -33 (ಎ) ಎಂದು ಗುರುತಿಸಲಾಯಿತು. ಸದರಿ ಎಮ್ ಎಲ್ ಸಿ/ನಿಪಿ -33 ರ ಆಧಾರದ ಮೇಲೆ ನಮ್ಮ ಸಿಬ್ಬಂದಿ ಹೆಚ್ ಸಿ -1445 ರವರು ಕೆರೂಡಿ ಆಸ್ಪತ್ರೆಗೆ ಭೇಟಿ ನೀಡಿದರು. ನಂತರ ಸಂಜೆ ಸುಮಾರು 08.15 ಗಂಟೆಗೆ ಚಾಸಾ -1/ಬಸಪ್ಪ ರವರು ಠಾಣೆಗೆ ಹಾಜರಾಗಿ ದೂರನ್ನು ದಾಖಲಿಸಿರುತ್ತಾರೆ. ಸಾಕ್ಷಿಯು ಸದರಿ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ -1 ಎಂದು ಗುರುತಿಸಲಾಗಿರುತ್ತದೆ. ನಂತರ ಅದೇ ದಿನ ಸದರಿ ದೂರಿನ ಆಧಾರದ ಮೇಲೆ ಯು ಡಿ ಆರ್ ನಂಬರ್ 26/2023 ನೇದ್ದನ್ನು ನಮೂದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಯು ಡಿ ಆರ್ ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -34 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -34 (ಎ) ಎಂದು ಗುರುತಿಸಲಾಯಿತು. ಮೃತ ಬಾಯವ್ವ ರವರ ಶವವನ್ನು ನಮ್ಮ ಸಿಬ್ಬಂದಿ ಹೆಚ್ ಸಿ -1445 ರವರು ಮುಂದಿನ ಕ್ರಮಕ್ಕಾಗಿ ಜಿಲ್ಲಾಸ್ಪತ್ರೆ, ಬಾಗಲಕೋಟೆಗೆ ಸಾಗಿಸಿದ್ದರು.

ನಂತರ ಅದೇ ದಿನ ರಾತ್ರಿ ಸುಮಾರು 10.00 ಗಂಟೆಗೆ ಜಿಲ್ಲಾಸ್ಪತ್ರೆ, ಬಾಗಲಕೋಟೆಗೆ ಭೇಟಿ ನೀಡಿ, ಮೃತ ಬಾಯವ್ವಳ ಶವದ ಮೇಲೆ ಶವ ಪಂಚನಾಮೆಯನ್ನು ಚಾಸಾ -2 ಮತ್ತು 3 ರವರ ಸಮಕ್ಷಮ ಜರುಗಿಸಿರುತ್ತೇನೆ.

ಶವ ಪಂಚನಾಮೆ ಕಾಲಕ್ಕೆ ಮೃತ ಬಾಯವ್ವ ರವರ ತಲೆಯ ಮೇಲೆ ಮತ್ತು ಬಲ ಮುಖದ ಮೇಲೆ ಗಾಯಗಳು ಕಂಡು ಬಂದಿರುತ್ತವೆ. ಸದರಿ ಪಂಚನಾಮೆಯನ್ನು ರಾತ್ರಿ ಸುಮಾರು 10.00 ರಿಂದ 11.00 ಗಂಟೆಗಯವರೆಗೆ ಜರುಗಿಸಲಾಯಿತು. ಸದರಿ ಶವ ಪಂಚನಾಮೆಯನ್ನು ಈಗಾಗಲೇ ನಿಪಿ -5 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ -5 (ಬಿ) ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ 5 ಭಾವಚಿತ್ರಗಳನ್ನು ಸಹ ತೆಗೆಸಿರುತ್ತೇನೆ. ಸಾಕ್ಷಿಯು ಭಾವಚಿತ್ರಗಳನ್ನು ನೋಡಿಗುರುತಿಸಿದ್ದು, ಅವುಗಳನ್ನು ಒಟ್ಟಾಗಿ ನಿಪಿ -2 ಎಂದು ಗುರುತಿಸಲಾಗಿರುತ್ತದೆ. ನಂತರ ಮೃತ ಬಾಯವ್ವ ರವರ ಶವವನ್ನು ಮರಣೋತ್ತರ ಪರೀಕ್ಷೆ ಗಾಗಿ ಚಾಸಾ -21 ರವರ ಬೆನ್ನಾವಲಿನಲ್ಲಿ ಕಳುಹಿಸಿ ಕೊಟ್ಟಿರುತ್ತೇನೇ. ಅದೇ ದಿನ ಚಾಸಾ -5, 6, 9, 10, 12, 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಚಾಸಾ -5 , 6,  10, 12, 13 ರವರು ನನ್ನ ಮುಂದೆ ನಿಪಿ -9, 4, 16, 20, 22 ರಂತೆ ಹೇಳಿಕೆ ನೀಡಿರುತ್ತಾರೆ.

ದಿನಾಂಕ 10.08.2023 ರಂದು ಚಾಸಾ-21 ರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಸದರಿ ವರದಿಯನ್ನು ನಿಪಿ -35 ಎಂದು, ಸಾಕ್ಷಿಯ ಸಹಿಯನ್ನು ನಿಪಿ -35 (ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ -8 ಮತ್ತು  11 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಚಾಸಾ -11 ರವರು ನಿಪಿ -18 ರಂತೆ ನನ್ನ ಮುಂದೆ ಹೇಳಿಕೆ ನೀಡಿರುತ್ತಾರೆ.

ನಂತರ ಘಟನಾ ಸ್ಥಳವಾದ ಮೃತಳ ತೋಟದ ಮನೆಗೆ ಭೇಟಿ ನೀಡಿ  ಚಾಸಾ -1 ರವರು ತೋರಿಸಿದ ಸ್ಥಳದಲ್ಲಿ  ಪಂಚರಾದ ಚಾಸಾ -4 ಮತ್ತು  5 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ  ನಿಪಿ -6 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -6 (ಸಿ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ಕಾಲಕ್ಕೆ ಘಟನಾ ಸ್ಥಳದಲ್ಲಿ ಸ್ಥಳದಲ್ಲಿ ಬಿದ್ದಿದ್ದ  ಎರಡು  ರಕ್ತ ಹತ್ತಿದ ಕಲ್ಲುಗಳನ್ನು, ರಕ್ತ ಹತ್ತಿದ ಮಣ್ಣು, ಮಾದರಿ ಮಣ್ಣು, ಬಟ್ಟೆ ತೊಳೆಯು ಕಲ್ಲಿಗೆ ಹತ್ತಿದ ರಕ್ತವನ್ನು ಹತ್ತಿಯಿಂದ ತೆಗೆದುಕೊಂಡು ಸಂಗ್ರಹಿಸಿ, ಮಾದರಿ ಹತ್ತಿಯನ್ನು ಜಪ್ತು ಪಡಿಸಿಕೊಂಡಿರುತ್ತೇನೆ.  ಸದರಿ ನಿಪಿ -6 ರ ಅಡಿಯಲ್ಲಿ ಜಪ್ತು ಪಡಿಸಿಕೊಂಡ ವಸ್ತುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮುಮಾ -1 ರಿಂದ 6 ಎಂದು ಗುರುತಿಸಲಾಗಿರುತ್ತದೆ. ಪಂಚನಾಮೆ ಕಾಲಕ್ಕೆ 4 ಭಾವ ಚಿತ್ರಗಳನ್ನು ಸಹ ತೆಗೆದಿರುತ್ತೇನೆ. ಸಾಕ್ಷಿಯು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ -3 ಎಂದು ಗುರುತಿಸಲಾಗಿರುತ್ತದೆ.

ನಂತರ ಅದೇ ದಿನ ಚಾಸಾ -21 ರವರು ವೈದ್ಯರಿಂದ ಮೃತ ಬಾಯವ್ವಳ ಶವ ಪಂಚನಾಮೆ ಕಾಲಕ್ಕೆ ಪಡೆದುಕೊಂಡ ಬಟ್ಟೆಗಳನ್ನು ನನ್ನ ಮುಂದೆ ತಂದು ಹಾಜರು ಪಡಿಸಿದ್ದು, ಅವುಗಳನ್ನು ಪಂಚರಾದ ಚಾಸಾ -4 ಮತ್ತು  5 ರವರ ಸಮಕ್ಷಮ ಪಂಚನಾಮೆ ಅಡಿ ಜಪ್ತು ಪಡಿಸಿಕೊಂಡಿರುತ್ತೇನೆ. ಅದೇ ದಿನ ಜಪ್ತು ಪಡಿಸಿಕೊಂಡ ಎಲ್ಲಾ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 97/2023 ರಲ್ಲಿ ನಮೂದಿಸಿರುತ್ತೇನೆ. ಸದರಿ ಪಂಚನಾಮೆ ಸಾಕ್ಷಿಯು

ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ -7 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -7 (ಸಿ) ಎಂದು ಗುರುತಿಸಲಾಯಿತು. ಮಾಲು ಪಟ್ಟಿ ಸಂಖ್ಯೆ 97/2023 ಅನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -36 ಎಂದು ಗುರುತಿಸಲಾಯಿತು. ನಿಪಿ -7 ರ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುವ ಮೃತ ಬಾಯವ್ವಳ ಸೀರೆ ಹಾಗೂ ಜಾಕೀಟನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಮುಮಾ -8 ಮತ್ತು 9 ಎಂದು ಗುರುತಿಸಲಾಯಿತು.

ದಿನಾಂಕ 12.08.2023 ರಂದು ಜಿಲ್ಲಾಸ್ಪತ್ರೆ, ಬಾಗಲೋಟೆಯಿಂದ ಮೃತಳ ಮರಣೋತ್ತರ ಪರೀಕ್ಷಾ ವರದಿ ಮತ್ತು ವೈದ್ಯರಿಂದ ಮೃತಳ ಕಾರಣ ವರದಿಯನ್ನು ಪಡೆದುಕೊಂಡಿರುತ್ತೇನೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ -28 ಮತ್ತು 29 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಪಿ -28 (ಬಿ ) ಮತ್ತು 29 (ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಮಧ್ಯಾಹ್ನ 03.30 ರಿಂದ 04.00 ಗಂಟೆಗೆ ನಮ್ಮ ಸಿಬ್ಬಂದಿ ಚಾಸಾ -22 ರವರು ಮೃತಳ ವಿಸರಗಳನ್ನು ವೈದ್ಯರಿಂದ ಪಡೆದುಕೊಂಡು ಬಂದು ಹಾಜರು ಪಡಿಸಿದ್ದು ಅವುಗಳನ್ನು ಪಂಚರಾದ ಚಾಸಾ -4 ಮತ್ತು 5 ರವರ ಸಮಕ್ಷಮ ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ವಿಸರ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ -8 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ -8 (ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಿಪಿ -8 ರಲ್ಲಿ ಜಪ್ತುಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 98/2023 ರಲ್ಲಿ ನಮೂದಿಸಿರುತ್ತೇನೆ. ಸಾಕ್ಷಿಯು ಸದರಿ ಜಪ್ತುಪಡಿಸಿಕೊಂಡ ವಸ್ತುಗಳನ್ನು ಮಾಲು ಪಟ್ಟಿ ಸಂಖ್ಯೆ 98/2023 ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ -37 ಎಂದು, ಸಾಕ್ಷಿಯ ಸಹಿಯನ್ನು ನಿಪಿ -37 (ಎ) ಎಂದು ಗುರುತಿಸಲಾಯಿತು.

ಅದೇ ದಿನ ಸಂಜೆ 07.35 ಗಂಟೆಗೆ ಚಾಸಾ -1 ರವರು ಮತ್ತೊಮ್ಮೆ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಠಾಣಾ ಮುಕದ್ದಮೆ ಸಂಖ್ಯೆ 144/2023 ರಲ್ಲಿ ನಮೂದಿಸಿರುತ್ತೇನೆ. ಸಾಕ್ಷಿಯು ದೂರು ಮತ್ತು ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು , ಅವುಗಳಲ್ಲಿ ದೂರನ್ನು ಈಗಾಗಲೇ ನಿಪಿ -4 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ -4 (ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ -38 ಎಂದು, ಸಾಕ್ಷಿಯ ಸಹಿಯನ್ನು ನಿಪಿ -38 (ಎ) ಎಂದು ಗುರುತಿಸಲಾಯಿತು. ನಂತರ ಪ್ರ.ವ.ವರದಿಯನ್ನು ನಮ್ಮ ಸಿಬ್ಬಂದಿ ಚಾಸಾ -20 ರವರ ಕಡೆಯಿಂದ ಮೇಲಾಧಿಕಾರಿಗಳಿಗೆ ಮತ್ತು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸದರಿ ಪ್ರಕರಣವು ಘೋರ ಪ್ರಕರಣವಾದ್ದರಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ -35/ಸಿಪಿಐ ಹೆಚ್ ಆರ್ ಪಾಟೀಲ ರವರಿಗೆ ವಹಿಸಿ ಕೊಟ್ಟಿರುತ್ತೇನೆ. ನಂತರ ತನಿಖಾ ಸಹಾಯಕನಾಗಿ ಮುಂದುವರೆದು ದಿನಾಂಕ 13.08.2023 ರಂದು ಚಾಸಾ -35 ರವರು ನೀಡಿದ ಜ್ಞಾಪನವನ್ನು ಸ್ವೀಕರಿಸಿ ಆರೋಪಿ

ಶಾಕವ್ವ ರವರ  ಪತ್ತೆಗಾಗಿ ಡಬ್ಲುಪಿಸಿ -17 ರವರ ಸಹಾಯದಿಂದ ಆರೋಪಿಯ ಪತ್ತೆ ಹಚ್ಚಿ  ಚಾಸಾ -35 ರವರ ಮುಂದೆ ವರದಿಯೊಂದಿಗೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ಜ್ಞಾಪನ ಮತ್ತು ವರದಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ -39 ಮತ್ತು  40 ಎಂದುದ, ಅವುಗಳಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ -39 (ಎ) ಮತ್ತು  40 (ಎ)  ಎಂದು ಗುರುತಿಸಲಾಯಿತು.

ದಿನಾಂಕ 16.08.2023 ರಂದು ಯು ಡಿ ಆರ್ ದ ಮೂಲ ಪ್ರತಿಯನ್ನು ಮತ್ತು ಯು ಡಿ ಆರ್ ಅಡಿಯಲ್ಲ ಜಪ್ತು ಪಡಿಸಿಕೊಂಡ ಮಾಲುಗಳನ್ನು ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಎಸಿ, ಬಾಗಲಕೋಟೆ ರವರಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ ನಿವೇದನೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ -41 ಎಂದು, ಸಾಕ್ಷಿಯ ಸಹಿಯನ್ನು ನಿಪಿ -41 (ಎ) ಎಂದು ಗುರುತಿಸಲಾಯಿತು.

ದಿನಾಂಕ 17.08.2023 ರಂದು ಜಪ್ತಾದ ಮಾಲುಗಳನ್ನು ಪ್ರಕರಣದಲ್ಲಿ ಅಳವಡಿಸಿಕೊಳ್ಳಲು ಎ ಸಿ ಬಾಲಕೋಟೆ ರವರು ಅನುಮತಿ ನೀಡಿರುತ್ತಾರೆ. ಸಾಕ್ಷಿಯು ಅನುಮತಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -42 ಎಂದು, ಸಾಕ್ಷಿಯ ಸಹಿಯನ್ನು ನಿಪಿ -42 (ಎ) ಎಂದು ಗುರುತಿಸಲಾಯಿತು. ದಿನಾಂಕ 19.08.2023 ರಂದು ಜಪ್ತಾದ ಮಾಲುಗಳನ್ನು ಚಾಸಾ -35 ರವರ ಮುಂದೆ ವರದಿಯೊಂದಿಗೆ  ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -43 ಎಂದು, ಸಾಕ್ಷಿಯ ಸಹಿಯನ್ನು ನಿಪಿ -43 (ಎ) ಎಂದು ಗುರುತಿಸಲಾಯಿತು.

ದಿನಾಂಕ 22.08.2023 ರಂದು ಚಾಸಾ -23 ರವರ ಮೂಲಕ ಮಾಲು ಪಟ್ಟಿ ಸಂಖ್ಯೆ 98/2023 ರಲ್ಲಿ ಜಪ್ತು ಪಡಿಸಿಕೊಂಡ ಮೃತಳ ವಿಸರಗಳನ್ನು ಎಫ್ ಎಸ್ ಎಲ್ ಪರೀಕ್ಷೆ ಗಾಗಿ ಕಳುಹಿಸಿ ಕೊಟ್ಟು ಚಾಸಾ -23 ರವರಿಂದ ಅವುಗಳನ್ನು ತಲುಪಿಸಿದ ಬಗ್ಗೆ ಸ್ವೀಕೃತಿಯನ್ನು ಪಡೆದಿರುತ್ತೇನೆ. ಸಾಕ್ಷಿಯು ಸದರಿ ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -44 ಎಂದು ಗುರುತಿಸಲಾಯಿತು.

ದಿನಾಂಕ 10.09.2023 ರಂದು ಎಫ್ ಎಸ್ ಎಲ್ ವರದಿಯನ್ನು ಪಡೆದುಕೊಂಡು ಚಾಸಾ -35 ರವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಎಫ್ ಎಸ್ ಎಲ್ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ -45 ಎಂದು, ಸಾಕ್ಷಿಯ ಸಹಿಯನ್ನು ನಿಪಿ -45 (ಎ) ಎಂದು  ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ** ಆರೋಪಿ ಪರ  ವಕೀಲರಿಂದ

ಚಾಸಾ -1 ರವರು ಸಲ್ಲಿಸಿದ ಮೊದಲನೇ  ನಿಪಿ -1 ದೂರಿನಲ್ಲಿ ಯಾವುದೇ ವ್ಯಕ್ತಿಗಳ ಮೇಲೆ ಸಂಶಯ ಪಟ್ಟಿರುವುದಿಲ್ಲ ಎಂದರೆ ಸರಿ. ಸದರಿ ನಿಪಿ-1 ದೂರಿನಲ್ಲಿ  ಮೃತ ಬಾಯವ್ವ ಕಾಲು ಜಾರಿ ಕಲ್ಲಿನ ಮೇಲೆ ಬಿದ್ದು ಆಗಿರಬಹುದು ಎಂದು ತಿಳಿಸಿರುತ್ತಾರೆ ಎಂದರೆ ಸರಿ. ಸದರಿ ದೂರನ್ನು ದಾಖಲಿಸಿಕೊಂಡ ನಂತರ ಚಾಸಾ -1, 8

ಮತ್ತು 11 ರವರನ್ನು ಸಂಶಯಾಸ್ಪದದ ಮೇಲೆ ಅವರನ್ನು ವಿಚಾರಣೆ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ -1, 8 ಮತ್ತು 11 ರವರನ್ನು ನಮ್ಮ ಠಾಣೆಯಲ್ಲಿ ಒಂದು ದಿನ ವಿಚಾರಣೆಗಾಗಿ ಇಟ್ಟುಕೊಂಡಿದ್ದೆವು ಎಂದರೆ ಸರಿಯಲ್ಲ. ನಾನು ನಿಪಿ -1 ರ ಆಧಾರದ ಮೇಲೆ ಯು ಡಿ ಆರ್ ಅನ್ನು ನಮೂದಿಸಿಕೊಂಡ ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಹಾಗೂ ಸ್ಥಳದಲ್ಲಿ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಹಾಗೆಯೇ ಆಸ್ಪತ್ರೆಗೆ ಭೇಟಿ ನೀಡಿ ಮೃತಳ ಶವದ ಮೇಲೆ ಪಂಚರ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಹಾಗೂ ಮೃತಳ ಯಾವುದೇ ಬಟ್ಟೆಯನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ -5, 6, 9, 10, 12, 13 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಚಾಸಾ -16 ಮತ್ತು 22 ರವರು ಸಹ ನನ್ನ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದಿಂದ ಯಾವುದೇ ವಸ್ತುಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಗುನ್ನೆ ಸಂಖ್ಯೆ 144/2023 ನೇದ್ದನ್ನು ದಾಖಲು ಮಾಡಿಕೊಳ್ಳಲು ಚಾಸಾ -1 ರವರು ಸ್ವ ಇಚ್ಛೆಯಿಂದ ದೂರನ್ನು ಸಲ್ಲಿಸಿರುವುದರಿಂದ ದಾಖಲಿಸಿಕೊಂಡಿರುತ್ತೇನೆ. ಆರೋಪಿಯ ಗಂಡನ ಆಸ್ತಿಯನ್ನು ದುರುದ್ದೇಶದಿಂದ ಪಡೆದುಕೊಳ್ಳಬೇಕೆಂದು ಚಾಸಾ -1 ರವರು ಆರೋಪಿಯ ಮೇಲೆ ಸುಳ್ಳು ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ತನಿಖೆಯನ್ನು ಮಾಡಿರುವುದಿಲ್ಲ ಮತ್ತು ತನಿಖಾ ಸಹಾಯಕನಾಗಿ ಸಹಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .